**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ-2722/2024**
**ಚಾಸಾ 21 /** ಪ್ರಾಸಾ- 5

| | |
|---|---|
| ಹೆಸರು | **ಮೋಹನ್ ಕುಮಾರ್** |
| ತಂದೆಯ ಹೆಸರು | **ವೀರಣ್ಣ** |
| ವಯಸ್ಸು | **41** |
| ಉದ್ಯೋಗ | **ಪಿ. ಐ, ತಾವರೆಕೆರೆ ಪೋ. ಠಾಣೆ** |
| ವಿಳಾಸ | **ತಾವರೆಕೆರೆ** |

ದಿನಾಂಕ:**28-08-2025**ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ **ಬೋಧಿಸಲಾಯಿತು.**

**ಮುಖ್ಯ ವಿಚಾರಣೆ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ-**

ನಾನು ದಿ.31-01-2024 ರಿಂದ ಇಲ್ಲಿಯವರೆಗೂ ತಾವರೆಕೆರೆ ಪೋ. ಠಾಣೆಯಲ್ಲಿ ಪಿ. ಐ ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ. 30-03-2024 ರಂದು ಚಾಸಾ-20 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನದಂದು ಚಾಸಾ-2ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಈಗ ಸಾಕ್ಷಿಗೆ ಚಾಸಾ-2ರವರ ಹೇಳಿಕೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಹೇಳಿಕೆಯನ್ನು ನಿಪಿ-12 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ದಿ.08-04-2024 ರಂದು ಆರೋಪಿಯ ಸಿ. ಡಿ. ಆರ್ ನ್ನು ನೀಡುವಂತೆ ಮಾನ್ಯ ಪೋ. ಅಧೀಕ್ಷರಿಗೆ ಮನವಿಯನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ಮನವಿ ಪತ್ರವನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಮನವಿ ಪತ್ರವನ್ನು ನಿಪಿ-13 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಅದೇ ದಿನದಂದು ಚಾಸಾ-2ರವರ ಗಾಯದ ಪ್ರಮಾಣಪತ್ರವನ್ನು ಕೋರಿ ಎಸ್. ಎಸ್. ಜಿ ಆಸ್ಪತ್ರೆಗೆ ಮನವಿಯನ್ನು ಸಲ್ಲಿಸಿರುತ್ತೇನೆ. ಈಗ ಸಾಕ್ಷಿಗೆ ಮನವಿ ಪತ್ರವನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಮನವಿ ಪತ್ರವನ್ನು ನಿಪಿ-14 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಅದೇ ದಿನದಂದು ಮೃತ ವ್ಯಕ್ತಿಯ ಪಿ. ಎಂ ವರದಿಯನ್ನು ರಾಜರಾಜೇಶ್ವರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ಈಗ ಸಾಕ್ಷಿಗೆ

ನಿಪಿ-10ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ದಿ.08-04-2024 ರಂದು ದ್ವಿಚಕ್ರವಾಹನ ಸಂ. ಕೆಎ-05-ಎಎನ್-0403 ರ ಬ ಬಗ್ಗೆ ಮಾಹಿತಿಯನ್ನು ಕೋರಿ ರಾಯಲ್ ಪ್ರೈ ವೇಟ್ ಲಿಮಿಟೆಡ್ ಕಂಪನಿಗೆ ಮನವಿಯನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ಮನವಿ ಪತ್ರವನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಮನವಿ ಪತ್ರವನ್ನು ನಿಪಿ-15 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ದಿ.12-04-2024 ರಂದು ಟಿಪ್ಪರ್ ಲಾರಿ ಸಂ. ಕೆಎ-25ಎಎ6915 ಮತ್ತು ದ್ವಿಚಕ್ರ ವಾಹನ ಸಂ.ಕೆಎ-05-ಎಎನ್-0403 ವಾಹನದ ತಪಾಸಣೆ ಮಾಡುವಂತೆ ಕೋರಿ ರಾಮನಗರದ ಆರ್. ಟಿ. ಓ ಕಛೇರಿಗೆ ಮನವಿಯನ್ನು ಮಾಡಿರುತ್ತೇನೆ. ಈಗ ಸಾಕ್ಷಿಗೆ ಮನವಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಮನವಿಯನ್ನು ನಿಪಿ-16 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-16 (ಎ) ಎಂದು ಗುರುತಿಸಲಾಯಿತು. ದಿ.13-04-2024 ರಂದು ಆರೋಪಿಯ ದೂರವಾಣಿ ಸಂಖ್ಯೆಯಾದ 7760957687 ಸಿ. ಡಿ. ಆರ್ ನ್ನು ಪಡೆದುಕೊಂಡಿರುತ್ತೇನೆ. ಈಗ ಸಾಕ್ಷಿಗೆ ಎರಡು ಪುಟಗಳ ವರದಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ವರದಿಯನ್ನು ನಿಪಿ-17 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಅದೇ ದಿನದಂದು ಚಾಸಾ-12ರವರಿಗೆ ಕಲಂ. 133 ಐ. ಎಂ. ವಿ ಕಾಯಿದೆ ರೀತ್ಯ ನೋಟಿಸಿ ನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ನೋಟಸ್ ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ನೋಟಿಸ್ ನ್ನು ನಿಪಿ-18 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

ಅದೇ ದಿನದಂದು ಚಾಸಾ-12ರವರು ನಿಪಿ-18ಕ್ಕೆ ಉತ್ತರವನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ಪ್ರತ್ಯುತ್ತರವನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪ್ರತ್ಯುತ್ತರವನ್ನು ನಿಪಿ-19 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಅದೇ ದಿನದಂದು ಆರೋಪಿಯನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ ಮತ್ತು ಅವರ ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತೇನೆ. ಈಗ ಸಾಕ್ಷಿಗೆ ಆರೋಪಿಯ ಹೇಳಿಕೆಯನ್ನು ತೋರಿಸಿದ್ದು,

ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಹೇಳಿಕೆಯನ್ನು ನಿಪಿ-20 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿದ್ದಾರೆ. ಅದೇ ದಿನದಂದು ಇಂಡೆಮ್ನಿಟಿ ಬಾಂಡ್ ನ್ನು ಪಡೆದು ಫೋಟೋವನ್ನು ತೆಗೆದು ಚಾಸಾ-12ರವರಿಗೆ ಟಿಪ್ಪರ್ ಲಾರಿಯನ್ನ ಬಿಡುಗಡೆ ಮಾಡಿರುತ್ತೇನೆ. ಈಗ ಸಾಕ್ಷಿಗೆ ಇಂಡೆಮ್ನಿಟಿ ಬಾಂಡ್ ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಇಂಡೆಮ್ನಿಟಿ ಬಾಂಡ್ ನಿಪಿ-21 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಿದ್ದು, ಅವುಗಳನ್ನು ನಿಪಿ-21ರಂತೆ ವಾಹನ ಬಿಡುಗಡೆ ಮಾಡುವ ಸಮಯದಲ್ಲಿ ತೆಗೆಯಲಾಗಿದೆ. ಸದರಿ ಫೋಟೋಗಳನ್ನು ನಿಪಿ-22 ಮತ್ತು 23 ಎಂದು ಗುರುತಿಸಲಾಯಿತು. ಅದೇ ದಿನದಂದು ಚಾಸಾ-2ರವರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಈಗ ಸಾಕ್ಷಿಗೆ ಚಾಸಾ-2ರವರ ಗಾಯದ ಪ್ರಮಾಣಪತ್ರವನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಗಾಯದ ಪ್ರಮಾಣಪತ್ರವನ್ನು ನಿಪಿ-24 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು.

ದಿ.15-04-2024 ರಂದು ಚಾಸಾ-11ರವರಿಂದ ದ್ವಿಚಕ್ರವಾಹನದ ದಾಖಲಾತಿಯನ್ನು ಪಡೆದುಕೊಂಡು ಇಂಡೆಮ್ನಿಟಿ ಬಾಂಡ್ ನ್ನು ಪಡೆದು ಫೋಟೋವನ್ನು ತೆಗೆದು ಚಾಸಾ-11ರವರಿಗೆ ದ್ವಿಚಕ್ರವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಈಗ ಸಾಕ್ಷಿಗೆ ಇಂಡೆಮ್ನಿಟಿ ಬಾಂಡ್ ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಇಂಡೆಮ್ನಿಟಿ ಬಾಂಡ್ ನಿಪಿ-25 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಿದ್ದು, ಅವುಗಳನ್ನು ನಿಪಿ-25 ರಂತೆ ವಾಹನ ಬಿಡುಗಡೆ ಮಾಡುವ ಸಮಯದಲ್ಲಿ ತೆಗೆಯಲಾಗಿದೆ. ಸದರಿ ಫೋಟೋಗಳನ್ನು ನಿಪಿ-26 ಮತ್ತು 27 ಎಂದು ಗುರುತಿಸಲಾಯಿತು. ದಿ.07-05-2024 ನಿಪಿ-11ರಂತೆ ಐ. ಎಂ. ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಈಗ ಸಾಕ್ಷಿಗೆ ನಿಪಿ-11ನ್ನು ತೋರಿಸಿದ್ದು,

ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿಯ ವಿರುದ್ದ ಆರೋಪವು ಸಾಬೀತಾದ ಕಾರಣದಿಂದ ನ್ಯಾಯಾಲಯಕ್ಕೆ ಆರೋಪಿಯ ವಿರುದ್ದ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು- ಆರೋಪಿಯ ಪರ ಶ್ರೀ. ಎನ್. ಕೆ , ವಕೀಲರಿಂದ-**

**01.** ನೀವು ಚಾಸಾ-2ರವರ ಹೇಳಿಕೆಯ ಮೇರೆಗೆ ತನಿಖೆಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಿ.30-03-2024 ರಂದು ನಾನು ಚಾಸಾ-2ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನೀವು ಯಾವುದೇ ತನಿಖೆಯನ್ನು ಮಾಡದೇ ಮೃತ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಮೃತ ಕುಟುಂಬದವರಿಗೆ ವಿಮೆ ಹಣ ಬರಬೇಕು ಎಂಬ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ, ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**